Regd No M 1299 34 th Year ತಾ|| 27—2—51

ಸತ್ಯವಾದಿ ಸೋಮವಾರ ಸಂಚಿಕೆ
ಶ್ರೀ ದ್ವಾರಕಾ ಜಗದ್ಗುರುಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುವ
ಪ್ರ ಬೋ ಧ
ಧಾರ್ಮಿಕ ಸಪ್ತಾಹಿಕವನ್ನೊಳಗೊಂಡಿದೆ
ವಾರ್ಷಿಕ ಚಂದಾ
ಅಂಚೆಸಮೇತ 1—14—0

ಸತ್ಯವಾದಿ
SATYAVADI

ಸಂಪಾದಕರು- ಅರಮನೆ ಸಿರಸ್ತೆದಾರ್ ಎಂ. ವಿ. ಸುಬ್ರಾಯರು [ಬಿಡಿ ಪ್ರತಿ 3 ಪೈ

ಗೋ ರ ಕ್ಷ ಣ
[ತಿಂಗಳಿಗೊಂದಾವರ್ತಿ]
ವಾರ್ಷಿಕಚಂದಾ ಅಂಚೆಸಮೇತ 8 ಆಣೆ

Protect the Cow
ಗೋರಕ್ಷಣೆ ನಡೆಯಲಿ

ದಿವ್ಯವಾಣಿ

ಯಾರು ನನಗೆ ದುಃಖವನ್ನೂ ಕಷ್ಟವನ್ನೂ ಉಂಟುಮಾಡುವರೋ ಅವರೇ ನಮ್ಮ ಸರ್ವೋತ್ತಮ ಸೇವಕರು.

(ಜ್ಞಾ. ಶ)

ರೆಡ್ಡಿ ನಿಧನದಿಂದ ನಷ್ಟ

ಭಾರತಕ್ಕೆ ಪ್ರಧಾನವಾಗಿ ಮೈಸೂರಿಗೆ ಡಾ|| ಸಿ. ಆರ್. ರೆಡ್ಡಿಯವರ ನಿಧನದಿಂದ ತುಂಬಲಾರದ ನಷ್ಟವಾಗಿದೆ — ಎಂದು ಬೆಂಗಳೂರು ಕಾರ್ಪೊರೇಷನ್ ಮೇಯರ್ ಶ್ರೀ ಆರ್. ಅನಂತರಾಮಣ್ಣ ರವರು ತಿಳಿಸಿದ್ದಾರೆ.

ತಕ್ಷಣ ಸುಧಾರಣೆ ಇಲ್ಲ

ನೇಪಾಳ ಒಳಾಡಳಿತ ಸಚಿವ ಶ್ರೀ ಬಿ. ಪಿ. ಕೊಯಿಲಂ ಖಟಮಂಡುವಿನಲ್ಲಿ ಹೇಳಿಕೆಯಿತ್ತ, ಕ್ರಾಂತಿಯುತವಾದ ಸುಧಾರಣೆಗಳನ್ನು ನೀಕ್ಷಿಸಬಾರದು. ಕ್ರಮಕ್ರಮವಾಗಿ ಬದಲಾವಣೆಗಳನ್ನು ತರಲಾಗುವದು ಎಂದು ತಿಳಿಸಿದ್ದಾರೆ.

ಮೈದ್ದರೆಂದು ಬಿಟ್ಟರು

ಎಂಬತ್ತೊಂದು ವರ್ಷದವರಾದುದರಿಂದ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಮದರಾಸಿನ ಪೂಜಿ ಮುಖ್ಯ ಸಚಿವ ಶ್ರೀ ಟಿ ಪ್ರಕಾಶಂರವರ ಮೇಲೆ ತಿಸ್ಸುಭಂಗ ಕ್ರಮದ ಅಗತ್ಯವಿಲ್ಲವೆಂದು ತೀರ್ಮಾನಿಸಲಾಯಿತು. ಮದರಾಸಿನ ಕೆಲ ಸಚಿವರು ಮೇಲೆ ತಿಸ್ಸು ವಿುರಿ ಅಪಾದನೆ ತಂದ ಬಗ್ಗೆ ಅವರ ವರ್ತನೆ ಖಂಡಿಸಲಾಯಿತೆಂದು ದಿಲ್ಲಿ ವಾರ್ತೆ.

ಜಲ ಸಮಾಧಿ

ಪೂನಾದ ಮುಲಿ ಅಣೆಕಟ್ಟಿನಲ್ಲಿ ದೋಣಿಯ ಮೇಲೆ ಹೋಗುತ್ತಿದ್ದ ನಲವತ್ತೂರು ಮಂದಿ ಪೈಕಿ 31 ಮಂದಿ ದೋಣಿ ಮುಳುಗಿದ್ದರಿಂದ ಸತ್ತರು ಇವರೆಲ್ಲ ಮದುವೆಗೋಸ್ಕರ ಬಂದಿದ್ದವರು

ನೋಡಿಕೊಳ್ತೀನೆ

ಚಕ್ರಬಂಧ ಮುಂತಾದ ಸ್ಪರ್ಧೆಗಳ ಮೇಲೆ ಅವು ಹೆಚ್ಚದಂತೆ ಕ್ರಮ ತೆಗೆದುಕೊಳ್ಳುವುದಾಗಿ ಮದರಾಸು ಕಾಯ್ದೆ ಸಚಿವರು ತಿಳಿಸಿರುವರು

ಗೋರಕ್ಷಣ ಚರ್ಚೆ ಆರಂಭ

ಭಾರತಾದ್ಯಂತ ಗೋರಕ್ಷಣೆ ನೆಂವೇರಬೇಕೆಂದು ಪಂ| ಥಾಕೂರ್‌ದಾಸ್ ಭಾರ್ಗವ ತಂದಿರುವ ನಿರ್ಣಯ ನಿನ್ನೆ ದಿಹಲಿ ಪಾರ್ಲಿಮೆಂಟಿನಲ್ಲಿ ಚರ್ಚೆಗೆ ಒಂತು

ಶೇಂದಿ ಅಂಗಡಿಗೆ ಭೇಟಿ

ಮೈಸೂರು ನಗರದಲ್ಲಿ ಎಕ್ಸೈಜು ಬೋರ್ಡ್ ಸದಸ್ಯರೂ ಮತ್ತು ಅಧ್ಯಕ್ಷರೂ ಮೈಸೂರು ನಗರದಲ್ಲಿರುವ ಎಲ್ಲಾ ಶೇಂದಿ ಷರಾಬುಗಳ ಅಂಗಡಿಗಳ ನೈರ್ಮಲ್ಯ ಮೊದಲಾದುವನ್ನು ಉತ್ತಮಗೊಳಿಸುವುದಕ್ಕಾಗಿ ಆ ಅಂಗಡಿಗಳಿಗೆ ಭೇಟಿ ಕೊಟ್ಟರೆಂದೂ, ಅವುಗಳಲ್ಲಿ ಕೆಲವು ಅಂಗಡಿಗಳನ್ನು ಬೇರೆ ಕಡೆಗೆ ಬದಲಾಯಿಸುವ ಯೋಚನೆ ಮಾಡಿದ್ದಾರೆಂದೂ ತಿಳಿದುಬಂದಿದೆ

೦೦೦೦

ಮೈಸೂರು ಗ್ರೇಜ್ ಮರ್ಚೆಂಟ್ಸ್ ಅಸೋಸಿಯೇಷನ್—ರೆಗ್ಯುಲೇಟೆಡ್ ಮಾರ್ಕೆಟ್ಟಿನಲ್ಲಿ ಹರಾಜು ಮೂಲಕ ವ್ಯಾಪಾರ ನಡೆಸಬೇಕೆಂದು ಸರ್ಕಾರದವರು ವಿಧಾಯಕವನ್ನಾಡುವ ದಿನಸುಗಳು ವಿನಹ ಇತರ ಎಲ್ಲಾ ಪದಾರ್ಥಗಳೂ ಇನ್ನು ಮುಂದೆ ಅಂದರೆ ತಾ|| ೨೮ ಬುಧವಾರ ಲಾಗಾಯ್ತು ಹಳೇ ಸಂತೇಪೇಟೆಯಲ್ಲಿರುವ ಸಾ || ಡಿ. ಪುಟ್ಟಯ್ಯನವರ ಅಂಗಡಿ ಪಕ್ಕದಲ್ಲಿರುವ ಮೈದಾನದಲ್ಲಿ ರಾತಿ ಸೇರಿ ಹರಾಜು ಮಾಡಬೇಕೆಂದು ತೀರ್ಮಾನಿಸಿರುತ್ತೆ.

ಬೆಂಗಳೂರು— ಕರ್ನಾಟಕ ಸಂಗೀತದ ಬಗ್ಗೆ ಮಂದಿರ ರಚಿಸುವ ಬಗ್ಗೆ ಮೈಸೂರು ಸಂಸ್ಥಾನದ ಮುಖ್ಯಮಂತ್ರಿ, ಮದರಾಸು ವಿದ್ಯಾಭ್ಯಾಸ ಮಂತ್ರಿ, ಹೈದರಾಬಾದು ವಿದ್ಯಾಮಂತ್ರಿ, ಮತ್ತು ಈ ಸರಕಾರಗಳ ಸಂಬಂಧಪಟ್ಟ ಅಧಿಕಾರಿಗಳ ಸಮ್ಮೇಳನ ನಡೆದು, ಏಪ್ರಿಲ್ ತಿಂಗಳಲ್ಲಿ ಸಮ್ಮೇಳನ ನಡೆಸಿ ಎಲ್ಲಾ ವಿಚಾರ ಪರ್ಯಾಲೋಚಿಸಲು ನಿರ್ಣಯಿಸಿದರು

ಪೆಹರ್ಣಾ ವಾರ್ತೆ ರೀತ್ಯ ಪರ್ಷಿಯದಲ್ಲಿ ನೋಟುಗಳ ಚಲಾವಣೆ ಹೆಚ್ಚುತ್ತದೆ

ಕಾಳಹಸ್ತಿಯಲ್ಲಿ ಅನ್ನವಿಲ್ಲದೆ ಮರಣ!

ಮದರಾಸು ಪ್ರಾಂತ್ಯದಲ್ಲಿ ವಿಲೀನವಾದ ಸುಡೂರು ಮತ್ತು ಬಂಗನಪಲ್ಲಿ ಸಂಸ್ಥಾನಗಳಲ್ಲಿ ಭೂ ಕಂದಾಯವನ್ನು ಶೇಕಡ 25 ರಷ್ಟು ಕಡಮೆ ಮಾಡಲು ಮದರಾಸು ಸರ್ಕಾರ ತೀರ್ಮಾನಿಸಿದೆ.

೦ ೦

ಪ್ರಪಂಚದ ಪಂಚ ಮಹಾರಾಷ್ಟ್ರಗಳು ಯುದ್ಧ ಮಾಡುವುದಿಲ್ಲವೆಂದು ಒಪ್ಪಂದ ಮಾಡಿಕೊಳ್ಳಬೇಕಾಗಿ ಪ್ರಪಂಚ ಶಾಂತಿ ಸಮಿತಿ ಮನವಿಮಾಡಿಕೊಂಡಿದೆ.

೦ ೦

ಮದ್ರಾಸು ಪ್ರಾಂತ್ಯದಲ್ಲಿ ನಾಟಕಗಳ ಮೇಲೆ ಮನರಂಜನ ತೆರಿಗೆ ತೆಗೆದು ಹಾಕಲಾಗುವುದೆಂದು ಅರ್ಥಿಕ ಸಚಿವರು ಹೇಳಿದ್ದಾರೆ

೦ ೦

ನವದೆಹಲಿ— ಭಾರತ-ಪಾಕಿಸ್ಥಾನಗಳಿಗಾದ ವಾಣಿಜ್ಯ ಒಪ್ಪಂದವು ಈ ಫೆಬ್ರವರಿ 26 ರಿಂದ 1952 ನೇ ಜೂನ್ 30 ರವರೆಗೆ ಜಾರಿಯಲ್ಲಿರುವುದು. ಭಾರತಕ್ಕೆ ಪಾಕಿಸ್ಥಾನ 35 ಲಕ್ಷ ಟೇಲು ಸೆಣಬು ಕೊಡಲಿದೆ, ಇಂದೂವರೆಲಕ್ಷ ಟನ್ ಅಕ್ಕಿ ಎಂಡೂ ಮುಕ್ಕಾಲು ಲಕ್ಷ ಟನ್ ಗೋಧಿ ಕೊಡಲೊಪ್ಪಿದೆ : ಪಾಕಿಸ್ಥಾನಕ್ಕೆ ಭಾರತ 6 ಲಕ್ಷ ಟನ್ ಕಲ್ಲಿದ್ದಲನ್ನು ಕೊಡಲೊಪ್ಪಿದೆ

೦ ೦

ಬೆಂಗಳೂರು— ಶ್ರೀ ಟಿ. ಟಿ ಕೃಷ್ಣಮಾಚಾರಿ ಸಂಸ್ಥಾನ ನಿಧಿಗೆ ಮುಖ್ಯಮಂತ್ರಿ ಶ್ರೀ ರೆಡ್ಡಿಯವರು. 101 ರೂ ಗಳನ್ನೂ ನ್ಯಾಯಾಂಗ ಮಂತ್ರಿ ಶ್ರೀ ಭಾಷ್ಯಂರು 50 ರೂ ಗಳನ್ನೂ ಇತ್ತಿದ್ದಾರೆ

೦ ೦

ರಂಗೂನ್— ಬರ್ಮಾಂತಾಟ ತೆರಿಗೆ ಪ್ರತಿಭಟಿಸಿ ಇಲ್ಲಿಯ ವ್ಯಾಪಾರ ಕೇಂದ್ರಗಳು ಹರತಾಳವನ್ನಾಚರಿಸಿದವು

25 ವರ್ಷ ಸಾಧು ಮುನಿಸ್ವಾಮಿ ಎಂಬ ಸೇಕಾರ ಅನ್ನವಿಲ್ಲದೆ ಇದೇ ತಾ|| 20 ರಲ್ಲೂ, 55 ವರ್ಷದ ಗಿಂಕಿ ಮುನಿಸ್ವಾಮಿ ಎಂಬ ಕೊತ್ತಪೇಟೆಯ ಮತ್ತೊಬ್ಬ ಸೇಕಾರ ಸಹಾ ಅನ್ನವಿಲ್ಲದೆ ಸತ್ತ ವಿಷಾದ ವಾರ್ತೆ ತಿರುಪತಿಯಿಂದ ಬಂದಿದೆ; ಅಧಿಕಾರಿಗಳು ಸ್ಥಳಕ್ಕೆ ಭೇಟಿ ಕೊಟ್ಟ ಅನ್ನವಿಲ್ಲದೆ ಮುಂಡ ಹೊಂದಿದರೆಂಬುದನ್ನು ಖಚಿತ ಮಾಡಿಕೊಂಡರೆಂದು ಗೊತ್ತಾಗಿದೆ ತಿರುವನ್ನಮಲೈಯಲ್ಲಿ ಸೇಕಾರರು ಸಮಾಜವಾದಿಗಳ ನೇತೃತ್ವದಲ್ಲಿ ಸತ್ಯಾಗ್ರಹ ಪ್ರಾರಂಭ ಮಾಡಿರುತ್ತಾರೆ

೦ ೦

ಮದರಾಸು ಗವರ್ನರ್ ಭವನದಲ್ಲಿ ಮಹಾರಾಜರು ತನ್ನ ನೇತನದಲ್ಲಿ ಶೇಕಡ 15 ರಷ್ಟು ಇಳಿಸಿಕೊಂಡಿರುವರು

೦ ೦

ಮಾರ್ಚಿ ೧೦ ' ಗೋರಕ್ಷಣ ' ಪುಸ್ತಕವಣಿ ಮುದ್ರಣದ ಅನುಕೂಲಕ್ಕಾಗಿ ನಾಳೆ ಪತ್ರಿಕೆ ಪ್ರಕಟಿಸಲ್ಪಡುವುದಿಲ್ಲ.

೦ ೦

ಮದರಾಸು ಸರ್ಕಾರಿ ನೌಕರರಿಗೆ ಏಪ್ರಿಲ್ ತಿಂಗಳಿಂದ ಮನೆ ಬಾಡಿಗೆ ಅಲೋಯನ್ಸು ಹೆಚ್ಚಿಸಲಾಗುವುದು.

೦ ೦

ಮುಂಬೈ— ಪೋಲಿಯಲ್ಲಿ ಒಂದು ಎಳ್ಳೇದೆಲೆ ಅಂಗಡಿ ಬಳಿ ಎಳ್ಳೇದೆಲೆ ಕೊಂಡ ಒಬ್ಬ ಹುಡುಗನಿಗೂ ಅಂಗಡಿಯವನಿಗೂ ಅಧಾರಣೆ ವಿಚಾರದಲ್ಲಿ ಉಂಟಾದ ವಾಗ್ವಾದದಿಂದ ಹೊಡೆದಾಟವೂ ಗಲಭೆಯೂ ಆಗಿ ಒಬ್ಬನು ಸತ್ತು ಇಬ್ಬರು ತೀವ್ರ ಗಾಯಗೊಂಡರು : ಪೋಲೀಸರು ಬಂದು ಗಲಭೆ ಅಡಗಿಸಿದರು; ಈ ಸಂದರ್ಭದಲ್ಲಿ 16 ಮಂದಿ ದಸ್ತಗಿರಿ ಮಾಡಲ್ಪಟ್ಟಿದ್ದಾರೆ

ಭಾರತ ದೇಶದಲ್ಲಿ ವಿದೇಶೀ ಬಂಡವಾಳ

ಭಾರತ ದೇಶದಲ್ಲಿ ವಿದೇಶೀಯ ಬಂಡವಾಳವು 300 ಕೋಟಿಗಳವರೆಗೆ ಇದೆ. ಇದರಲ್ಲಿ ಬಹಳ ಮಟ್ಟಿಗೆ ಇಂಗೀಷಿನವರದೇ ಆಗಿದೆ; 18 ಕೋಟಿ ಮಾತ್ರ ಅಮೇರಿಕಾದವರದು. ಅಮೇರಿಕದವರು ಇನ್ನೂ ಹೆಚ್ಚು ಮಾಡಲು ಪ್ರಯತ್ನಿಸುತ್ತಿದ್ದಾರೆ. ವಿದೇಶದ ಬಂಡವಾಳವಿರುವ ಕಡೆಗಳಲ್ಲಿ ಅವಶ್ಯವಾಗಿ ಆ ದೇಶೀಯರ ಮ್ಯಾನೇಜುಮೆಂಟು ಇರುತ್ತದೆ: ಮ್ಯಾನೇಜುಮೆಂಟಿನೊಂದಿಗೆ ಅವುಗಳ ಕಂಟ್ರೋಲು ಕೂಡ ಏರ್ಪಡುತ್ತದೆ. ಕಲ್ಕತ್ತಾದಲ್ಲಿ ನಾರಿನ ಕೈಗಾರಿಕೆ' ಅಸ್ಸಾಂ, ಉದಕಮಂಡಲಗಳಲ್ಲಿ ಕಾಫೀ, ಚಾ ತೋಟಗಳೂ ಇದಕ್ಕೆ ಉದಾಹರಣೆಗಳು. ಕೇವಲ ವಿದೇಶೀಯು ವಾಣಿಶ್ಯಾವಿ ಸಂಸ್ಥೆಗಳಲ್ಲವೆಂದು ಹೇಳಲಿಕ್ಕಾಗಿ ಅವುಗಳಲ್ಲಿ ಭಾರತೀಯರೂ ಷೇರುಹೋಲ್ಡರುಗಳಾಗಿಯೂ, ಡೈರೆಕ್ಟರುಗಳಾಗಿಯೂ ಇರುತ್ತಾರೆ. ಆದರೆ ಎಂದಿಗಾದರೂ ಇದು ಭಾರತ ರಿಪಬ್ಲಿಕ್ ಆರ್ಥಿಕ ಸ್ವಾತಂತ್ರ್ಯಕ್ಕೆ ಹಾನಿಕರವು. ಚೀನಾದಲ್ಲಿ ವಿದೇಶಗಳ ಬಂಡವಾಳವು ಯಾವ ರೂಪವನ್ನು ಹೊಂದಿತೋ ಚರಿತ್ರಪ್ರಸಿದ್ಧವಾಗಿದೆ. ಅದುದರಿಂದ ಭಾರತೀಯು ಕೋಟೀಶ್ವರರು ಸಾಹಸ ಮಾಡಿ, ಕೈಗಾರಿಕೆಯ ಸಂಸ್ಥೆಗಳನ್ನು ವಿಶೇಷವಾಗಿ ಸ್ಥಾಪಿಸಿ ಭಾರತ ಕೈಗಾರಿಕೆಗಳಲ್ಲಿ ತಮ್ಮದೇ ಮೇಲಿನ ಕೈ ಆಗಿ ಮಾಡಿಕೊಳ್ಳದಿದ್ದಲ್ಲಿ ಭಾರತ ರಿಪಬ್ಲಿಕ್ಕಿಗೂ ಕ್ಷೇಮ ವಿಲ್ಲವಲ್ಲ; ಭಾರತ ರಿಪಬ್ಲಿಕ್ಕ ವಿದೇಶ ಪಂತವಾದ ಆರ್ಥಿಕ ನೀತಿಯೊಡನೆ ಭಾರತೀಯ ಕೋಟೀಶ್ವರರನ್ನು ಭಾರತೀಯು ಕೈಗಾರಿಕೆಗಳನ್ನ ಸ್ಥಾಪಿಸಿ, ಅಭಿವೃದ್ಧಿಗೊಳಿಸುವಂತೆ ಕೂಡತಕ್ಕದ್ದು. (ತ್ರಿ)

Edited, Printed and Published by M. S. Krishna Rao. at the Satyavadi Press Chamrajpuram Mysore

Kann. (Eng. 430)

ಸಂದರ್ಶನ

ಬಹಳ ಜನರಿಗೆ ಪ್ರಖ್ಯಾತ ಪುರುಷರ ಮತ್ತು ಸ್ತ್ರೀಯರ ವಿಷಯದಲ್ಲಿ ಹಂಟಿ ಹೊಡೆಯುವುದರಲ್ಲಿ ಹೆಚ್ಚು ಅಭಿಲಾಷೆ. ಚರ್ಚಿಲ್ಲರು ವಿರಾಮ ವೇಳೆಯಲ್ಲಿ ಏನು ಮಾಡುವರೆಂಬುದನ್ನೂ, ಬಿಂಗ್ ಕ್ರಾಸ್ಬಿಗೆ ಯಾವ ಪುಸ್ತಕಗಳ ಮೇಲೆ ಅಭಿರುಚಿ ಎಂಬುದನ್ನೂ, ಸತಿ ರೂಸ್ವೆಲ್ಟರಿಗೆ ಎಷ್ಟು ಮಂದಿ ಮೊಮ್ಮಕ್ಕಳೆಂಬುದನ್ನು ಅರಿಯಲು ಇಚ್ಛಿಸುತ್ತಾರೆ.

ಈ ಎಲ್ಲ ಕಾರಣಗಳು ವಿಜ್ಞಾನಿಗಳು ಸರ್ವಾಂತರ್ಯಾಮಿಯಾದ ಪತ್ರಿಕೋದ್ಯೋಗಿಯಿಂದ ತನ್ನ ಚಪಲಚಿತ್ತರಾದ ಓದುಗರ ಆಹ್ಲಾದಕ್ಕಾಗಿ ಶಯಾರಿಸಲ್ಪಡುವನೆ ಬಹು ಅನನುಕೂಲ ವೇಳೆಯಲ್ಲಿ, ಆತನು ವಿನೆಗೆ, ಉಡುಪು ಧರಿಸುವ ಕೊಠಡಿಗೆ ಅಥವಾ ಕಛೇರಿಗೆ ನುಗ್ಗುತ್ತಾನೆ, ಮತ್ತು ತಾನು ಒಯಸಿದವರು ಕೈಗೆ ಸಿಕ್ಕಿದರೆ, ಬೇಕಾದ್ದೆಲ್ಲಾ ಕೇಳಿ ಕೇಳಿ ಉತ್ತರ ಗೀಚಿಕೊಳ್ಳುತ್ತಾನೆ.

ವರ್ತಮಾನಗಳ ಹಿಂದೆ ಫ್ರೀಜೀಕ್ ಜುಕ್ಸ್ ವುಚ್ ಸಂದರ್ಶಿಸಲ್ಪಟ್ಟನು. ಪ್ರಪಂಚದ ಪ್ರತಿಯೊಂದೂ ಕಣಕಣವು ಭೂಕಂಪದ ಮೇಲೆ ಪ್ರಯಾಣಮಾಡುವ ವಿಚಿತ್ರ ಭಾವನೆಯುಳ್ಳ ಊಹಿಸಿದ ವ್ಯಕ್ತಿಯು ಅತನು ಎಂಬುದು ನಿಮ್ಮ ನೆನಪಿನಲ್ಲಿರಬಹುದು. 1927 ನೇ ಜುಲೈನಲ್ಲಿ ಹೊಂಟನು, ಮತ್ತು 1938 ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಪ್ರದರ್ಶಿಸಲ್ಪಟ್ಟನು. ಪ್ರತಿಕೋದ್ಯೋಗಿಯಿಂದ 'ನಿಮ್ಮ ಆರೋಗ್ಯವೆಂತಿದೆ' ಎಂದು ಕೇಳಲ್ಪಟ್ಟನು. 'ಬಹು ಅಚ್ಚುಕಟ್ಟಾಗಿದೆ; ನೆಗಡಿ ಆಗಾಗ ಉಂಟಾಗುತ್ತದೆ; ಈಜಿಪ್ಟಿನಲ್ಲಿದ್ದಾಗ ಮಲೇರಿಯಾದಿಂದ ಪೀಡಿಸಲ್ಪಟ್ಟೆನು, ಆದರೆ ಮಾಜಿ ಲೀಗ್ ಆಫ್ ನೇಷನ್ಸಿನ ಮಲೇರಿಯಾ ಸಮಿತಿಯು ಸೂಚನೆ ಅನ ಸರಿಸಿದ್ದರಿಂದ ಏನೂ ತೊಂದರೆಯಾಗಲಿಲ್ಲ. 5–7 ದಿನಗಳವರೆಗೆ 15–20 ಗ್ರೇ ಕ್ವಿನೈನನ್ನು ಸೇವಿಸಿದೆ, ಮತ್ತು ಪ್ರತಿಬಂಧಕವಾಗಿ ಮಲೇರಿಯಾ ಕಾಲದಲ್ಲಿ, ದಿನವೂ 6 ಗ್ರೇ ಕ್ವಿನೈನನ್ನು ಸೇವಿಸುತ್ತೇನೆ ಅದು ಆಶ್ಚರ್ಯಕರವಾದ ರೀತಿ ಸಹಾಯಕಂವಾಗಿದೆ, ಮತ್ತು ಈ ಔಷಧವನ್ನು ಕ್ಷೇಮವಾಗಿ ಪ್ರತಿಯೊಬ್ಬರಿಗೂ ಶಿಫಾರಸು ಮಾಡಬಲ್ಲೆ' ಎಂದು ವುಚ್ ಉತ್ತರವಿತ್ತನು 1948 ರಲ್ಲಿ ಮಾಜಿ ಲೀಗ್ ಆಫ್ ನೇಷನ್ಸಿನ ಮಲೇರಿಯಾ ನಿಪುಣ ಸಮಿತಿಯವರು ದೀರ್ಘವಾದ ಪರಿಶೀಲನೆಯಿಂದ ಮೇಲ್ಕಂಡ ಸಿದ್ಧಾರಕ್ಕೆ ಒಂದಿರುವುದು; ಅನೇಕ ವರ್ಷಗಳು ಕಳೆದುಹೋಗಿದ್ದರೂ, ಈ ಔಷಧೋಪಚಾರವು ಇಂದೂ ಶಿಫಾರಸು ಮಾಡಲ್ಪಡುತ್ತಿದೆ.

ಉಡ್‌ಲಾಂಡ್
ಶಿ ನ
26–2–51ರಿಂದ
Facinating English Picture
KANSAN
ರಿಚ್ಚರ್ಡ್ ಹಿಕ್ಸ್ — ಜೇಕ್ ವಾಟ್
ಪಾತ್ರವಹಿಸಿರುವ
ಕನಸನ
ಸೊಗಸಾದ ಇಂಗ್ಲೀಷು ಚಿತ್ರ
ಪ್ರತಿ ದಿನ 3 ಪ್ರದರ್ಶನಗಳು

Announcement
Theatre building old materials and furniture are being sold very cheap.
Apply to—
NEW OPERA TALKIES
MYSORE

ಏನೆನೂ ಕಟ್ಟಡದ ಹಳೇ ಸಾಮಾನುಗಳೂ ಫರ್ನೀಚರುಗಳೂ ಸುಲಭ ಬೆಲೆಗೆ ಮಾರಾಟಕ್ಕಿವೆ
ವಿವರಗಳಿಗೆ—
ನ್ಯೂ ಅಪೇರಾ ಟಾಕೀಸ್
ಮೈಸೂರು

"ಗೃಹಲಕ್ಷ್ಮಿ"
ಪ್ರತಿ ತಿಂಗಳ ಕಾಲ್ 1 ರಲ್ಲಿ ಪ್ರಕಟವಾಗುವ 'ಗೃಹಲಕ್ಷ್ಮಿ' ದಲ್ಲಿ ಗೋಧರ
ಕಥಾ ಸಾಮ್ರಾಟರೆ, ಪದ್ಯಾಕಾರರಾಗಿಯೂ, ಚಂದಾದಾರರಾಗಿಯೂ. ಲೇಖಕರಾಗಿಯೂ
ನಗರ ಪ್ರಕಟಣೆಗಳ ಕುರಿತಾದ ಲೇಖ
ನಕ್ಕೆಗೆ ಪೋಷಕರಾಗಿಯೂ, ಪ್ರಚಾರಕರಾಗಿಯೂ ಸಹಕಾರ ನೀಡುವ ಮಹನೀಯರಿಗೆ ವಂದನೆಗಳು.

ರಣಜಿತ್
ಅಮೋಘ 3 ನೇ ವಾರ
ಬಹಳ ದಿನಗಳಿಂದಲೂ ನಿರೀಕ್ಷಿಸುತ್ತಿದ್ದ
ಕರ್ದಾರ್‌ವರ
ದಾನಾನ್
ಪಾತ್ರ: ಸುರೈಯ, ರಾಜಕಪೂರ್, ವೀಣ
ಪ್ರತಿ ದಿನ 3 ಪ್ರದರ್ಶನಗಳು

ಐ. ಟಿ. ಎಲ್. ಗ್ರೈಪ್ ಸಿರಪ್
ನಿಮ್ಮ ಮುದ್ದು ಕಂದನ
ಅಜೀರ್ಣ ವ್ಯಾಧಿಗಳನ್ನು ಕಡಿದು
ಆರೋಗ್ಯ ಕಾವಾಡುವ ಅಮೃತವಾನ
— ಶಯಾಂಕರು —
ದಿ ಮೈಸೂರು ಇಂಡಸ್ಟ್ರಿಯಲ್
ಅಂಡ್ ಟಿಸ್ಪಿಂಗ್ ಲ್ಯಾಬೊರೇಟರಿ
ಲಿ. ಟಿ ಡ್
ಮಲ್ಲೇಶ್ವರಂ ಪೋಸ್ಟ್, ಬೆಂಗಳೂರು 3

ಶೀಷ್ಮತಿಯ
ಹುಗ್ಗಲ್ಲರು
ITL ಗ್ರೈಪ್ ಸಿರಪ್

For Quality Printing
L. N. Press
Sivarampet, Mysore
ಶಕಿಸುದಾ
— ಉತ್ತಮವಾದ ಟಾನಿಕ್ —